ಅ) ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ತೆಗೆದುಕೊಳ್ಳುವ ಕಾಮಗಾರಿಗಳಾದ ರಸ್ತೆಗಳು ಕಟ್ಟಡಗಳು, ಸೇತುವೆಗಳು ಮುಂತಾದವುಗಳ ಶಾಶ್ವತ ನಿರ್ವಹಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು

ಆ) ಈ ಕಾಮಗಾರಿಗಳ ಶಾಶ್ವತ ನಿರ್ವಹಣೆಯಿಲ್ಲದೆ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಇವುಗಳ ವಾರ್ಷಿಕ ನಿರ್ವಹಣೆಗೆ ಎಷ್ಟು ಹಣ ಕಾದಿರಿಸಲಾಗುತ್ತಿದೆ ಇಲ್ಲವಾದಲ್ಲಿ ಇದಕ್ಕೆ ಕಾರಣಗಳೇನು ಇನ್ನು ಮುಂದಾದರೂ ಇದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಎಂ ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ರಾಜ್ಯದಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ತೆಗೆದುಕೊಳ್ಳುವ ಕಾಮಗಾರಿಗಳಾದ ರಸ್ತೆಗಳು ಕಟ್ಟಡಗಳು, ಸೇತುವೆಗಳು ಮುಂತಾದವುಗಳ ಶಾಶ್ವತ ನಿರ್ವಹಣೆಗಾಗಿ ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಅನುದಾನವನ್ನು ಒದಗಿಸಲಾಗಿರುತ್ತದೆ

1 ರಸ್ತೆ ಮತ್ತು ಸೇತುವೆಗಳು – ಲೆಕ್ಕಶೀರ್ಷಿಕೆ 3054 ಯೋಜನೇತರ

2 ಕಟ್ಟಡಗಳು ಲೆಕ್ಕಶೀರ್ಷಿಕೆ 2059

ಆ) ಇವುಗಳ ನಿರ್ವಹಣೆಗೆ ಹೆಚ್ಚಿನ ಅನುದಾನದ ಅವಶ್ಯಕತೆ ಇದೆ

ಇ) 2003–04ನೇ ಸಾಲಿನಲ್ಲಿ ವಾರ್ಷಿಕ ನಿರ್ವಹಣೆಗಾಗಿ ಈ ಕೆಳಕಂಡ ಹಣ ನಿಗದಿಪಡಿಸಲಾಗಿದೆ

ರಸ್ತೆ ಮತ್ತು ಸೇತುವೆಗಳ ನಿರ್ವಹಣೆಗಾಗಿ	ರೂ 7124 93 ಲಕ್ಷಗಳು
ಕಟ್ಟಡ ನಿರ್ವಹಣೆಗಾಗಿ	ರೂ 1524 00 ಲಕ್ಷಗಳು

ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕ ಖರೀದಿ

153 (220) ಶ್ರೀ ಲಕ್ಷ್ಮೀನಾರಾಯಣ ಎಂ ಡಿ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಾರ್ವಜನಿಕ ಗ್ರಂಥಾ ಗಳಿಗೆ ಪುಸ್ತಕ ಖರೀದಿಗೆ ಸಂಬಂಧಿಸಿದಂತೆ ಆದೇಶ ಹೊರಡಿಸಿದೆಯೇ

ಆ) ಈ ಆದೇಶದ ಪ್ರಮು· ·ಗಳೇನು ಈ ಆದೇಶವನ್ನು ಜಾರಿಗೆ ತರಲಾಗಿದೆಯೇ ಇಲ್ಲದಿದ್ದಲ್ಲಿ, ಕಾರಣಗ·

ಇ) ಸದರಿ ಆದೇಶಕ್ಕೆ ಮು· ಕ್ಷೆಗಳು ·ನ್ನು ನಿಜವೇ

ಈ) ನಿಜವಿದ್ದಲ್ಲಿ, ಈ ತಡೆ ೇ ನ್ನು ಧಿಕ್ಕರಿಸ ುತ್ತೋಲೆ ಪಾಲಿಸುವಂತೆ ಉನ್ನತ ಮಟ್ಟದ ಆಯ್ಕೆ ಸಮಿತಿಗೆ ಸೂಚಿ ಮು ಸರಿಯೆ

ಉ) ಈ ಬೆಳವಣಿಗೆಗಳಿಗೆ ಗಳೇನು

ಊ) ಆಯ್ಕೆ ಸಮಿತಿಯ ೇನು ಈ , ುಲ್ಲಿರುವವರು ಯಾರು ಇದರ ಕಾರ್ಯವ್ಯಾಪ್ತಿ ಏನು?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಹೌದು

ಆ) ಅನುಬಂಧದಲ್ಲಿ ನೀಡಿದೆ
ಪ್ರಸ್ತುತ ಆದೇಶ ಜಾರಿಯಲ್ಲಿದೆ
ಉದ್ಭವಿಸುವುದಿಲ್ಲ

ಇ) ದಿನಾಂಕ 02-12-2003ರ ಪತ್ರದ ಅನ್ವಯ ಪುಸ್ತಕ ಖರೀದಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ

ಈ) ಉನ್ನತ ಮಟ್ಟದ ಆಯ್ಕೆ ಸಮಿತಿಗೆ ಸರ್ಕಾರದಿಂದ ಯಾವುದೇ ಸೂಚನೆ ನೀಡಿರುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಉನ್ನತ ಮಟ್ಟದ ಆಯ್ಕೆ ಸಮಿತಿಯು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಲ್ಲಿ ಎಲ್ಲಾ ಪ್ರಕಾರಗಳ ಅತ್ಯತ್ತಮ ಪುಸ್ತಕಗಳನ್ನು ಆಯ್ಕೆ ಮಾಡುವ ಪಾತ್ರ ಹೊಂದಿರುತ್ತದೆ ಸರ್ಕಾರದಿಂದ ರಚಿಸಲ್ಪಟ್ಟ ಉನ್ನತ ಆಯ್ಕೆ ಸಮಿತಿಯಲ್ಲಿ ನಾಡಿನ ಹೆಸರಾಂತ ಸಾಹಿತಿಗಳು, ಶಿಕ್ಷಣ ತಜ್ಞರು, ವಿಷಯ ತಜ್ಞರು, ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪುಸ್ತಕ ಪ್ರಾಧಿಕಾರದ ಪ್ರತಿನಿಧಿಗಳು ಈ ಸಮಿತಿಯಲ್ಲಿ ಇರುತ್ತಾರೆ ರಾಜ್ಯದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಿಗೆ ಅತ್ಯತ್ತಮ ಪುಸ್ತಕಗಳನ್ನು ಆಯ್ಕೆ ಮಾಡಿಕೊಡುವ ಕಾರ್ಯ ವ್ಯಾಪ್ತಿಯನ್ನು ಹೊಂದಿರುತ್ತದೆ

ಅನುಬಂಧ

1) ಲೇಖಕ ಹಾಗೂ ಲೇಖಕ ಪ್ರಕಾಶಕರಿಂದ ಅವರು ಅಧಿಕೃತವಾಗಿ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯಡಿ ನೋಂದಾಯಿಸದೇ ಇದ್ದರೂ, ನೇರವಾಗಿ ಗ್ರಂಥಗಳನ್ನು ಖರೀದಿಸಬಹುದು
2) ಖರೀದಿ ಬೆಲೆಯ ಮೇಲೆ ಶೇಕಡ 15ರಷ್ಟು ಸೋಡಿಯನ್ನು ಪಡೆಯುವುದು
3) ಸರಬರಾಜು ಆದೇಶವನ್ನು ಸಾಧ್ಯವಾದಷ್ಟು ಮಟ್ಟಿಗೆ ಪುಸ್ತಕ ಮಾರಾಟಗಾರರಿಗೆ ಬದಲಾಗಿ ಪ್ರಕಾಶಕರಿಗೆ ನೀಡಬೇಕು
4) ಹೆಚ್ಚಿನ ಸೋಡಿ ಪಡೆಯುವ ಬಗ್ಗೆ ಮುಚ್ಚಳಿಕೆ ಪಡೆಯುವ ಬಗ್ಗೆ
5) ಆಯ್ಕೆ ಸಮಿತಿಗೆ ವಿಷಯ ತಜ್ಞರನ್ನು, ಭಾಷಾ ತಜ್ಞರನ್ನು ಸೇರಿಸಿಕೊಳ್ಳಬಹುದಾಗಿದೆ
6) ಅನುದಾನದ ಶೇಕಡ 80ರಷ್ಟು ಹಣವನ್ನು ಕನ್ನಡ ಗ್ರಂಥಗಳಿಗೆ ಬಳಸಲು, ಶೇಕಡ 10ರಷ್ಟು ಹಣವನ್ನು ಭಾರತೀಯ ಭಾಷೆ, ಶೇಖಡ 10 ಇಂಗ್ಲೀಷ್ ಪುಸ್ತಕಗಳಿಗೆ ನಿಗದಿಪಡಿಸಿದೆ
7) ಯಾವುದೇ ಗ್ರಂಥವನ್ನು ಖರೀದಿಸುವಾಗ, ಆ ಗ್ರಂಥದ ಇತ್ತೀಚಿನ ಆವೃತ್ತಿಯನ್ನು ಮಾತ್ರ ಖರೀದಿಸಬೇಕು
8) ಒಂದೇ ಶೀರ್ಷಿಕೆಯನ್ನು ಪುನ ಖರೀದಿಸಬಾರದು ಆದರೆ, ಅವಶ್ಯಕತೆ ಇದ್ದಲ್ಲಿ, ಆಯ್ಕೆ ಸಮಿತಿಯ ಒಪ್ಪಿಗೆ ಪಡೆದು ಖರೀದಿಸಬಹುದು

9) ಯಾವುದೇ ಪ್ರಕಾಶನ ಸಂಸ್ಥೆ ಲೇಖಕ ಪ್ರಕಾಶಕರು, ಲೇಖಕರು ಇವರಿಂದ ಒಂದು ವರ್ಷದಲ್ಲಿ ರೂ 35,000,00 ಮೀರದ ಬೆಲೆಯಲ್ಲಿ ಖರೀದಿಸಬಾರದು

10) ಪುಸ್ತಕ ಆಯ್ಕೆ ಸಮಿತಿ ಆಯ್ಕೆ ಮಾಡಿದ ಪುಸ್ತಕಗಳನ್ನು ಮಾತ್ರ ಖರೀದಿಸಬೇಕು ಆಯ್ಕೆಯಾದ ಪುಸ್ತಕಗಳನ್ನು ಆಯಾಯಾ ಆರ್ಥಿಕ ವರ್ಷ ಹಾಗೂ ಅದರ ಮುಂದಿನ ವರ್ಷ ಮಾತ್ರ ಖರೀದಿಸಬಹುದು

11) ಆಯ್ಕೆ ಸಮಿತಿಯ ಸ್ಪಷ್ಟ ಅನುಮೋದನೆಯ ನಂತರವೇ ಖರೀದಿಸತಕ್ಕದ್ದು ಯಾವುದೇ ಸಂದರ್ಭದಲ್ಲಿ ಖರೀದಿಸಿ ಘಟನೋತ್ತರ ಅವಧಿ ಕೋರಬಾರದು

ಡೆಂಗೆ ಜ್ವರ ಪ್ರಕರಣಗಳು

155 (222) ಶ್ರೀ ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಡೆಂಗೆ ಜ್ವರಕ್ಕೆ ಸಂಬಂಧಿಸಿದಂತೆ, ರಾಷ್ಟ್ರ ಅಥವಾ ರಾಜ್ಯ ಮಟ್ಟದಲ್ಲಿ ಯಾವುದಾದರೂ ನೀತಿ ಪ್ರಕಟಗೊಂಡಿದೆಯೇ

ಆ) ರಾಜ್ಯದಲ್ಲಿ ಈ ಡೆಂಗೆ ಜ್ವರ ಕಾಣಿಸಿಕೊಂಡು ಎಷ್ಟು ಪ್ರಕರಣಗಳು ಪತ್ತೆಯಾಗಿವೆ? (ಜಿಲ್ಲಾವಾರು ವಿವರ ಒದಗಿಸುವುದು)

ಇ) ಡೆಂಗೆಜ್ವರ ಹರಡಲು ಕಾರಣವೇನು? ಈ ರೋಗದ ಸ್ವರೂಪ ಎಂತಹುದು ಇದರ ನಿಯಂತ್ರಣಕ್ಕೆ ಯಾವ ಕಾರ್ಯಕ್ರಮ ರೂಪಿಸಲಾಗಿದೆ,

ಈ) ಡೆಂಗೆ ಜ್ವರದಿಂದ ಇದುವರೆಗೆ ರಾಜ್ಯದಲ್ಲಿ ಬಲಿಯಾದವರು ಸಂಖ್ಯೆ ಎಷ್ಟು ಡೆಂಗೆ ಜ್ವರದ ಪತ್ತೆಯನ್ನು ಹೇಗೆ ಮಾಡಲಾಗುತ್ತದೆ

ಉ) ಇದನ್ನು ಶಾಶ್ವತವಾಗಿ ತಡೆಯಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ರಾಜ್ಯದಲ್ಲಿ 2003ನೇ ಸಾಲಿನಲ್ಲಿ ವರದಿಯಾದ ಡೆಂಗಿ ಪ್ರಕರಣಗಳ ಜಿಲ್ಲಾವಾರು ವಿವರ ಹೀಗಿದೆ

ಜಿಲ್ಲೆ	ಡೆಂಗಿ ಪ್ರಕರಣಗಳು	ಜಿಲ್ಲೆ	ಡೆಂಗಿ ಪ್ರಕರಣಗಳು
ಬೆಂಗಳೂರು ನಗರ ಜಿಲ್ಲೆ	66	ದಾರವಾಡ	14
ಬೆಂಗಳೂರು ಮಹಾನಗರ ಪಾಲಿಕೆ	381	ಉತ್ತರ ಕನ್ನಡ	1
ಬೆಂಗಳೂರು (ಗ್ರಾ)	86	ಗುಲ್ಬರ್ಗ	1
ಕೋಲಾರ	203	ಬಳ್ಳಾರಿ	13
ತುಮಕೂರು	68	ರಾಯಚೂರ್	6
ಚಿತ್ರದುರ್ಗ	8	ಮೈಸೂರು	58
ದಾವಣಗೆರೆ	18	ಚಾಮರಾಜನಗರ	19